# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 201 |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 03.03.2020 |
| ಉತ್ತರಿಸುವ ಸಚಿವರು | : | ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಪ್ರತಿ ವರ್ಷ ಕೇಂದ್ರ ಸರ್ಕಾರದ ಆರ್ಥಿಕ ನೆರವಿನೊಂದಿಗೆ ರಾಜ್ಯ ಸರ್ಕಾರವು ರೈತರಿಂದ ಭತ್ತ ಖರೀದಿ ಮಾಡುತ್ತಿದೆಯೇ: | ಹೌದು. |
| ಆ | ಖರೀದಿ ಮಾಡಲಾದ ಭತ್ತವನ್ನು ಸ್ಥಳೀಯ ನೋಂದಾಯಿತ ಅಕ್ಕಿ ಗಿರಣಿಗಳಿಂದ ಭತ್ತವನ್ನು ಹಲ್ಲಿಂಗ್ ಮಾಡಲು ಕ್ವಿಂಟಾಲ್ ಒಂದಕ್ಕೆ ರೂ.10/- ನಿಗಧಿಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಕೇಂದ್ರ ಸರ್ಕಾರವು 2019-20ನೇ ಸಾಲಿನ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ರೈತರಿಂದ ಸಂಗ್ರಹಿಸುವ ಭತ್ತವನ್ನು ಹಲ್ಲಿಂಗ್ ಮಾಡಲು ಪ್ರತಿ ಕ್ವಿಂಟಾಲ್ ಗೆ ರೂ.10/- ರಂತೆ ಅಕ್ಕಿ ಗಿರಣಿಗಳಿಗೆ ದರ ನಿಗಧಿಪಡಿಸಿದೆ. |
| ಇ | ಹಾಗಾದರೆ, ಸದರಿ ದರವನ್ನು ಯಾವ ಸಾಲಿನಿಂದ ನಿಗಧಿಗೊಳಿಸಲಾಗಿದೆ: | 2018-19 ಮತ್ತು 2019-20ನೇ ಸಾಲುಗಳಿಗೆ ಸದರಿ ದರವನ್ನು ಕೇಂದ್ರ ಸರ್ಕಾರವು ನಿಗಧಿಪಡಿಸಿದೆ. |
| ಈ | ಸದರಿ ರೂ.10/- ದರವನ್ನು ದೀರ್ಘಕಾಲದಿಂದ ಪರಿಷ್ಕರಿಸದಿರಲು ಕಾರಣಗಳೇನು: (ವಿವರಗಳೊಡನೆ) | ದರ ಪರಿಷ್ಕರಣೆ ಕಾರ್ಯವು ಕೇಂದ್ರ ಸರ್ಕಾರದ ವ್ಯಾಪ್ತಿಗೆ ಒಳಪಡುತ್ತದೆ |
| ಉ | ಯಾವ ಕಾಲಮಿತಿಯಲ್ಲಿ ಸದರಿ ದರವನ್ನು ಪರಿಷ್ಕರಿಸಲಾಗುವುದು? | ಉದ್ಭವಿಸುವುದಿಲ್ಲ. |

ಆನಾಸ 26 ಆರ್‌ಪಿಆರ್ 2020 (ಇ-ಆಫೀಸ್)

(ಕೆ.ಗೋಪಾಲಯ್ಯ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಹಾಗೂ
ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.